C.C,No.117/2019 cross of PW 3

ದಿನಾಂಕ 13-10-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು :** ಆರೋಪಿಯ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ 4 ರವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ನಾನು ಕನ್ನಡದಲ್ಲಿ ಮಾಡಿದ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ 4 ರವರಿಗೆ ಭಾತ್ಮಿ ಬಂದಾಗ ನಾನು ಬ್ಲಾಕ್ 4, ಕಂ.ನಂಬರ 5 ರಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೇನು. ಆಗ ಸಮಯ ಮಧ್ಯಾಹ್ಣ 01-30 ಆಗಿತ್ತು. ನಾನು ಜಮಗಾ ಪಶ್ಚಿಮ ಬೀಟ್ ನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ನನ್ನ ಕರ್ತವ್ಯ ಜಾಗದಿಂದ ವಲಯ ಕಚೇರಿಗೆ ನನ್ನ ಸ್ವಂತ ವಾಹನದಲ್ಲಿ ಬಂದೆ. ನಾನು ವಲಯ ಕಚೇರಿಗೆ ಬಂದಾಗ ಸಮಯ 02-00 ಆಗಿತ್ತು ಎನ್ನುತ್ತಾರೆ. ನೀವು ಘಟನಾ ಜಾಗಕ್ಕೆ ಸಿಬ್ಬಂದಿ ಮತ್ತು ಪಂಚರನ್ನು ಕರೆದುಕೊಂಡು ನಡೆದುಕೊಂಡು ಹೋದೆವು. ಪಂಚರು ಅಮಗಾ ಮತ್ತು ಜಮಗಾ ಗ್ರಾಮದವರು ಎಂದರೆ ಸರಿ. ಪಂಚರಿಬ್ಬರು ಗೌಳಿ ಜನಾಂಗದವರು, ಅವರು ಅರಣ್ಯದಲ್ಲಿ ವಾಸಿಸುತ್ತಾರೆ ಎಂದರೆ ಸರಿ. ಅಂಬಿಕಾನಗರದಿಂದ ನಾಗರ್ಝುರಿಕೊಳ್ಳ ಅಂದಾಜು 30 ಕಿ.ಮೀ ಇದೆ ಎನ್ನುತ್ತಾರೆ. ಅಂಬಿಕಾನಗರದಿಂದ ನಾಗರ್ಝುರಿಕೊಳ್ಳಕ್ಕೆ ಹೋಗಲು ಒಟ್ಟು ಎಷ್ಟು ಕಾಲುದಾರಿಗಳು ಇವೆ ಎನ್ನುವುದು ನನಗೆ ಗೊತ್ತಿಲ್ಲ. ಅರಣ್ಯದಲ್ಲಿ ಅಂದಾಜು 1 ವರೆ ಕಿ.ಮೀ ನಡೆದುಕೊಂಡು ಹೋದೆವು. ಗುರುತು ಮಾಡಿದ ಸಾಗವಾಣಿ ಗಿಡದ ಸುತ್ತುಳತೆ 73 ಸೆಂ.ಮೀಟರ್ ಇತ್ತು. ಸಾಗವಾಣಿ ಗಿಡದ ಸುತ್ತುಳತೆ 73 ಸೆಂ.ಮೀಟರ್ ಇತ್ತು ಎಂದು ಪಂಚನಾಮೆಯಲ್ಲಿ ಬರೆಸಿದ್ದೇನೆ ಎನ್ನುತ್ತಾರೆ. ಜಪ್ತುಪಡಿಸಿದ ಉಡವನ್ನು ಪಶು ವೈದ್ಯಾಧಿಕಾರಿಗಳಿಂದ ಚಿಕಿತ್ಸೆಗೆ ಒಳಪಡಿಸಿಲ್ಲ. ಪಶು ವೈದ್ಯಾಧಿಕಾರಿಯ ಹತ್ತಿರ ಉಡಕ್ಕೆ ಚಿಕಿತ್ಸೆ ಕೊಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಸುಮ್ಮನೆ ನಿಂತುಕೊಳ್ಳುತ್ತಾರೆ. ಉಡದ ನಾಲಿಗೆ ಎಷ್ಟು ಇಂಚು ಹರಿದಿತ್ತು ಎಂದು ಪರಿಶೀಲನೆ ಮಾಡಿಲ್ಲ. ಜಪ್ತುಪಡಿಸಿದ ಉಡವನ್ನು ಕಾಡಿಗೆ ಬಿಟ್ಟ ಜಾಗ ಬ್ಲಾಕ ನಂಬರ 2, ಕಂ.ನಂಬರ 5. ದಿನಾಂಕ 02-05-2009 ರಂದು ಮಾಡಿದ ಪಂಚನಾಮೆಯನ್ನು ಎಷ್ಟು

ಗಂಟೆಯಿಂದ ಪ್ರಾರಂಭ ಮಾಡಿ ಎಷ್ಟು ಗಂಟೆಗೆ ಮುಕ್ತಾಂಗೊಳಿಸಿದೀರಿ ಎಂದರೆ ಸಾಕ್ಷಿ ನನಗೆ ನೆನಪು ಇಲ್ಲ ಎನ್ನುತ್ತಾರೆ.

ಉಡ 104 ಸೆಂ.ಮೀಟರ್ ಇತ್ತು. ಅದರ ಹೊಟ್ಟೆಯ ಸುತ್ತಳತೆ 28 ಸೆಂ.ಮೀಟರ್ ಇತ್ತು. ದಿನಾಂಕ 29-04-2009 ರಂದು ಜರುಗಿಸಿದ ಪಂಚನಾಮೆಯಲ್ಲಿ ಉಡದ ಅಂದಾಜು ತೂಕ 1 ವರೆ ಕೆ ಜಿ ಎಂದು ನಮೂದಿಸಿದ್ದೀರಿ ಎಂದರೆ ಸರಿ. ಆ ದಿನ ಪಂಚರ ಸಮಕ್ಷಮ ಕೊಡಲಿಯ ಕಾವನ್ನು ಜಪ್ತುಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಜಪ್ತುಪಡಿಸಿದ್ದೇವೆ ಎನ್ನುತ್ತಾರೆ. ಜಪ್ತುಪಡಿಸಿದ ಕೊಡಲಿಯ ಕಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಚಾಸಾ 4 ರವರ ಮುಂದೆ ನೀಡಿದ ಹೇಳಿಕೆಯಲ್ಲಿ ಉಡದ ಅಂದಾಜು ತೂಕ ಅರ್ಧ ಕಿಲೋ ಗ್ರಾಂ ಇತ್ತು ಎಂದು ನುಡಿದಿರುತ್ತೀರಿ ಎಂದರೆ ಸರಿ, ಅದು ತಪ್ಪಾಗಿರುತ್ತದೆ ಎನ್ನುತ್ತಾರೆ. ಸದರಿ ಹೇಳಿಕೆಯನ್ನು **ನಿಡಿ 1** ಎಂದು, ಸಂಬಂಧಪಟ್ಟ ಭಾಗವನ್ನು **ನಿಡಿ 1 ಎ** ಎಂದು ಗುರುತಿಸಲಾಯಿತು. ಯಾವುದೇ ಘಟನೆ ನಡೆದಿಲ್ಲ, ಆರೋಪಿ 1 ರವರು ಯಾವುದೇ ತಪ್ಪ ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮತ್ತು ಪಂಚರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ಮು.ಮಾ. ಅನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ 2 ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.